ಆದುದರಿಂದ ದಯವಿಟ್ಟು ಇದು ವಿಶ್ವವಿದ್ಯಾನಿಲಯಕ್ಕೆ ಹೋಗತಕ್ಕಂಥ ರಸ್ತೆಯಾಗಿರುವುದರಿಂದ ಇದನ್ನು ಆದಷ್ಟು ಜಾಗ್ರತೆಯಾಗಿ ಚೆನ್ನಾಗಿ ಮಾಡಿಸಿದರೆ ಸರಕಾರಕ್ಕೂ ಒಂದು ಒಳ್ಳೆಯ ಹೆಸರು ಬರುತ್ತದೆ. ನಿಮಗೂ ಕೀರ್ತಿ ಬರುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದು ವಿಶ್ವವಿದ್ಯಾನಿಲಯಕ್ಕೆ ಹೋಗುವ ರಸ್ತೆಯಾಗಿರುವುದರಿಂದ ಪಂತಕ್ಕಿ ಹೆಚ್ಚಿಗೆ ವಾಹನಗಳ ಸಂಚಾರ ಇರುವುದರಿಂದ ದುರಸ್ತಿ ಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ. ಈಗಾಗಲೇ ಈ ರಸ್ತೆಯ ವಿಸ್ತಾರವನ್ನು ಕೂಡ ಮಾಡಬೇಕೆಂದು ಪ್ರಸ್ತಾವನೆ ಇರುವುದರಿಂದ ಆ ಬಗ್ಗೆ ಯೋಚಿಸಲಾಗುತ್ತಿದ್ದು, ಅದಕ್ಕೆ ಸುಮಾರು ೧೧ ಲಕ್ಷ ರೂಪಾಯಿಗಳ ವೆಚ್ಚವು ತಗಲುತ್ತದೆ. ಆದುದರಿಂದ ಸಂಪನ್ಮೂಲದ ಲಭ್ಯತೆಯನ್ನು ನೋಡಿಕೊಂಡು ಆ ಕೆಲಸವನ್ನು ಮಾಡಲಾಗುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಸಚಿವರು ಹಣದ ಲಭ್ಯತೆಯ ವಿಷಯವನ್ನು ಹೇಳುತ್ತಾ ಇದ್ದಾರೆ. ಈ ಕೆಲಸವನ್ನು ಒಮ್ಮೆಗೇ ಮಾಡಲು ಅಸಾಧ್ಯವಾದಲ್ಲಿ ಅದನ್ನು ಹಂತ ಹಂತವಾಗಿ ಮಾಡಬಹುದಾಗಿದೆ. ಈ ವರ್ಷ ಮೊದಲ ಹಂತವನ್ನು ಪ್ರಾರಂಭ ಮಾಡಿದರೆ ಬರುವ ವರ್ಷಕ್ಕೆ ಇನ್ನುಳಿದ ಕಾರ್ಯ ಹಾಗೂ ವಿಸ್ತಾರ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆಧ್ಯತೆಯ ಮೇಲೆ ಈಗ ಸ್ವಲ್ಪವಾದರೂ ಕೆಲಸವನ್ನು ಕೈಗೆತ್ತಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಆ ಬಗ್ಗೆ ಪ್ರಯತ್ನ ಮಾಡುತ್ತೇನೆ.

ಗಂಗಾವತಿ ತಾಲ್ಲೂಕಿನಲ್ಲಿ ರಸ್ತೆಗಳ ದುರಸ್ತಿ

೨೧೦೮. ಶ್ರೀ ರಂಗದೇವರಾಯಲು (ಕನಕಗಿರಿ).— ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಕಳೆದ ಮೂರು ವರ್ಷಗಳಲ್ಲಿ ಗಂಗಾವತಿ ತಾಲ್ಲೂಕಿನಲ್ಲಿ ಡಾಂಬರು ಮತ್ತು ದುರಸ್ತಿ ಮಾಡಲಾಗಿರುವ ರಸ್ತೆಗಳೆಷ್ಟು, (ರಸ್ತೆಗಳ ಉದ್ದದ ವಿವರ ನೀಡುವುದು).

ಆ) ಸದರಿ ಕಾಮಗಾರಿಗಳಿಗಾಗಿ ತಗಲಿದ ವೆಚ್ಚವೆಷ್ಟು (ಪ್ರತ್ಯೇಕ ವಿವರಗಳನ್ನೊದಗಿಸುವುದು)?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಕಳೆದ ಮೂರು ವರ್ಷಗಳಲ್ಲಿ ಗಂಗಾವತಿ ತಾಲ್ಲೂಕಿನಲ್ಲಿ ಡಾಂಬರು, ಮತ್ತು ದುರಸ್ತಿ ಮಾಡಿಸಲಾದ ರಸ್ತೆಗಳ ವಿವರ ಈ ಕೆಳಗಿನಂತಿದೆ.

ಡಾಂಬರು ಮಾಡಿದ ರಸ್ತೆ ಉದ್ದ (ಕಿ.ಮೀ.ಗಳಲ್ಲಿ)

	ರಸ್ತೆಗಳು	೧೯೮೫-೮೬	೧೯೮೬-೮೭	೧೯೮೭-೮೮
೧	ರಾಜ್ಯ ಹೆದ್ದಾರಿಗಳು ...	೩.೦೦	೪.೮೦	—
೨	ಮುಖ್ಯ ಜಿಲ್ಲಾ ರಸ್ತೆಗಳು ...	೧.೩೦	೪.೫೦	—
೩	ಜಿಲ್ಲಾ ಪರಿಷತ್ ರಸ್ತೆಗಳು ...	—	೨.೨೦	೧.೧೦
	ಒಟ್ಟು ...	೪.೩೦	೧೧.೩೦	೧.೧೦

ದುರಸ್ತಿ ಮಾಡಿದ ರಸ್ತೆಗಳ ಉದ್ದ (ಕಿ.ಮೀ.ಗಳಲ್ಲಿ)

	ರಸ್ತೆಗಳು	೧೯೮೫-೮೬	೧೯೮೬-೮೭	೧೯೮೭-೮೮
೧	ರಾಜ್ಯ ಹೆದ್ದಾರಿಗಳು	೭.೦೦	೩.೫೦	—
೨	ಮುಖ್ಯ ಜಿಲ್ಲಾ ರಸ್ತೆಗಳು	೫.೦೦	೩.೪೦	—
೩	ಜಿಲ್ಲಾ ಪರಿಷತ್ ರಸ್ತೆಗಳು	೧೬.೦೦	೧೬.೦೦	೧೫.೨೦
	ಒಟ್ಟು	೨೮.೦೦	೨೨ ೭೦	೧೫.೨೦

ಅ) ಡಾಂಬರು ಮಾಡಿದ್ದು (ಲಕ್ಷ ರೂ.ಗಳಲ್ಲಿ)

	ರಸ್ತೆಗಳು	೧೯೮೫-೮೬	೧೯೮೬-೮೭	೧೯೮೭-೮೮
೧	ರಾಜ್ಯ ಹೆದ್ದಾರಿಗಳು	೧.೪೫	೨.೮೫	—
೨	ಮುಖ್ಯ ಜಿಲ್ಲಾ ರಸ್ತೆಗಳು	೦.೪೯	೨.೦೧	—
	ಒಟ್ಟು	೧.೯೪	೪.೮೬	—

ದುರಸ್ತಿ ಮಾಡಿದ್ದು (ಲಕ್ಷ ರೂ.ಗಳಲ್ಲಿ)

	ರಸ್ತೆಗಳು	೧೯೮೫-೮೬	೧೯೮೬-೮೭	೧೯೮೭-೮೮
೧	ರಾಜ್ಯ ಹೆದ್ದಾರಿಗಳು	೧.೭೨	೧.೧೯	—
೨	ಮುಖ್ಯ ಜಿಲ್ಲಾ ರಸ್ತೆಗಳು	೧.೩೨	೧.೧೨	—
	ಒಟ್ಟು	೩.೦೪	೨.೩೧	—

ಜಿಲ್ಲಾ ಪರಿಷತ್ ರಸ್ತೆಗಳು

ಡಾಂಬರು ಮತ್ತು ದುರಸ್ತಿ ಮಾಡಿದ್ದು (ಲಕ್ಷ ರೂ.ಗಳಲ್ಲಿ)

೧೯೮೫-೮೬	೧೯೮೬-೮೭	೧೯೮೭-೮೮
೪.೧೩	೩.೬೯	೧.೮೭

ಶ್ರೀ ಶ್ರೀರಂಗದೇವರಾಯಲು.—ಅಧ್ಯಕ್ಷರೇ, ನಾನು ಪ್ರಶ್ನೆ ಕೇಳುತ್ತಿಲ್ಲ. ನಾನು ದೊಡ್ಡ ರಸ್ತೆಗಳಿಗೆ ಎಷ್ಟು ಡಾಂಬರು ಹಾಕಿದರು, ಜಿಲ್ಲಾಪರಿಷತ್ತು ರಸ್ತೆಗಳು ಎಷ್ಟು ಆದುವು ಎಂದು ಕೇಳುತ್ತಿಲ್ಲ. ಹಳ್ಳಿಗಾಡಿನ ರಸ್ತೆಗಳು ಎಷ್ಟು ಮುಗಿದಿವೆ ಎಂಬ ವಿವರ ನನಗೆ ಬೇಕು ?

ಶ್ರೀ ಎಂ. ಚಂದ್ರಶೇಖರ್ (ಲೋಕೋಪಯೋಗಿ ಸಚಿವರು).—ಅಧ್ಯಕ್ಷರೇ, ಈ ವರ್ಷದಿಂದ ಹಳ್ಳಿಗಾಡಿನ ರಸ್ತೆಗಳಲ್ಲಿ ಆಯಾ ಜಿಲ್ಲಾಪರಿಷತ್ತುಗಳ ವ್ಯಾಪ್ತಿಗೆ ಬರುತ್ತವೆ. ಅಲ್ಲಿರುವ ಬಿಡುಗಡೆಯಾದ ಅನುದಾನದ ಪ್ರಮಾಣವನ್ನನುಸರಿಸಿ ಸ್ಥಳೀಯ ಶಾಸಕರು ಜಿಲ್ಲಾಪರಿಷತ್ತುಗಳ ಮೂಲಕ ಸದರಿ ಕೆಲಸಗಳನ್ನು ಮಾಡಿಸಿಕೊಳ್ಳಬಹುದು.

ಶ್ರೀ ಶ್ರೀರಂಗದೇವರಾಯಲು.—ನನಗೆ ಈ ವಿಚಾರದಲ್ಲಿ ಜಿಲ್ಲಾ ಪರಿಷತ್ತುಗಳಿಂದ ಸರಿಯಾದ ರೆಸ್ಪಾನ್ಸ್ ಸಿಗುತ್ತಿಲ್ಲ. ೬೭-೬೮ರ ಸಾಲಿನಲ್ಲಿ ವಿಲೇಜ್ ರೋಡ್ಸ್ ನಮ್ಮ ವಿರಿಯಾದಲ್ಲಿ ಒಂದು ಕಿ. ಮೀ. ಕೂಡ ಆಗಿಲ್ಲ ಅನಿಸುತ್ತಿದೆ. ಆಗಿದ್ದರೂ ಅದೂ ತುಂಬಾ ಕಡಿಮೆಯಾಯಿತು. ಜೊತೆಗೆ ಇರಿಗೇಷನ್ ಇಲಾಖೆ ಪಾಗೂ ಲೋಕೋಪಯೋಗಿ ಇಲಾಖೆಯವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕೇವಲ ಜಿಲ್ಲಾ ಪರಿಷತ್ತುಗಳು ವರ್ಷಕ್ಕೆ ಒಂದು ಕಿ. ಮೀ. ನಂತೆ ಕೆಲಸ ಮಾಡಿದರೆ ಪೂರ್ತಿ ಮಾಡಿಸಲು ಎಷ್ಟು ವರ್ಷ ಬೇಕಾಗಬಹುದು ?

ಶ್ರೀ ಎಂ. ಚಂದ್ರಶೇಖರ್.—ಗಂಗಾವತಿ ಸುತ್ತಮುತ್ತಲಿನ ಪ್ರದೇಶ ನೀರಾವರಿಯಾಗಿದೆ. ಆದ್ದರಿಂದ ಅಲ್ಲಿ ವಾಹನಗಳ ಓಡಾಟವೂ ಹೆಚ್ಚಿರುತ್ತದೆ. ದುರಸ್ತಿ ಕೆಲಸ ಕೂಡ ಆಗಬೇಕಾಗುತ್ತಿರುತ್ತದೆ. ಇದಕ್ಕೆ ಹಣಕಾಸಿನ ಪರಿಸ್ಥಿತಿಯೂ ಮುಖ್ಯವಾಗಿರುತ್ತದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಜಿಲ್ಲಾಪರಿಷತ್ತುಗಳು ಕೆಲಸ ಮಾಡಬೇಕಾಗುತ್ತದೆ.

ಶ್ರೀ ಶ್ರೀರಂಗದೇವರಾಯಲು.—ಜಿಲ್ಲಾ ಪರಿಷತ್ತಿನ ರಸ್ತೆಗಳ ಲಿಸ್ಟ್ ಕಳಿಸಿಕೊಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಆಗಲಿ.

ಗುಬ್ಬಿ ತಾಲ್ಲೂಕಿನಲ್ಲಿ ತೆಂಗು ಸಂಶೋಧನಾ ಕೇಂದ್ರ

೧೭೦೩. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ತಾಲ್ಲೂಕಿನಲ್ಲಿ ತೆಂಗು ಸಂಶೋಧನಾ ಕೇಂದ್ರವನ್ನು ಮಂಜೂರು ಮಾಡಲು ಕೇಂದ್ರ ಸರ್ಕಾರದವರು ಮುಂದೆ ಬಂದಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಸದರಿ ಕೇಂದ್ರಕ್ಕೆ ಬೇಕಾಗುವ ಜಮೀನನ್ನು ಮಂಜೂರು ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಇ) ಹಾಗಿಲ್ಲದಿದ್ದಲ್ಲಿ ಗುಬ್ಬಿ ತಾಲ್ಲೂಕು ನಿಟ್ಟೂರು ಹೋಬಳಿ ಬಿದರೆಹಳ್ಳಿ ಕಾವಲ್‌ನಲ್ಲಿ ಇರುವ ಸುಮಾರು ೧ ಸಾವಿರದ ೨೦೦ ಎಕರೆಯಲ್ಲಿ ೬೦೦ ಎಕರೆಯನ್ನು ಮಂಜೂರು ಮಾಡುವುದು ಸೂಕ್ತವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ತೋಟಗಾರಿಕೆ ಮತ್ತು ವಿದ್ಯುತ್ ರಾಜ್ಯ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈ ವಿಷಯ ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್ ಶಿವನಂಜಪ್ಪ..—ಅಧ್ಯಕ್ಷರೇ, ಮಂತ್ರಿಗಳ ಉತ್ತರ ನೋಡಿದರೆ ನನಗೆ ಸರ್ಕಾರ ಎಚ್ಚರವಾಗಿದೆಯೋ ಇಲ್ಲವೋ ಎನಿಸುತ್ತಿದೆ. ದೊಡ್ಡ ದೊಡ್ಡ ಹರೇಕೃಷ್ಣ ಶಾಸ್ತ್ರಿಗಳು ತಮಿಳುನಾಡಿನಲ್ಲಿ ಈ ಬಗ್ಗೆ ಆಶ್ವಾಸನೆ ಕೊಟ್ಟಿದ್ದು ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆಲ್ಲ ಗೊತ್ತಿದೆ. ಸಂಶೋಧನಾ ಕೇಂದ್ರಕ್ಕೆ ರಾಜ್ಯ ಸರ್ಕಾರ ಜಾಗ ಕೊಡುವುದಾದರೆ ಈ ಕೇಂದ್ರವನ್ನು ಕೊಡುವುದಾಗಿ ಅವರು ಹೇಳಿದ್ದಾರೆ. ಇಲ್ಲಿ ನೋಡಿದರೆ ನನಗೆ ಗೊತ್ತಿಲ್ಲ ಎಂದು ಸಚಿವರು ಹೇಳುತ್ತಿದ್ದಾರೆ. ಆದ್ದರಿಂದ ಈಗಾದರೂ ಜಾಗವನ್ನು ಮಂಜೂರು ಮಾಡುತ್ತೀರಾ ಎಂಬುದನ್ನು ಹೇಳಬೇಕು ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಕೇಂದ್ರ ಸರಕಾರದ ಮಂತ್ರಿಗಳು ತಿಪಟೂರಿಗೆ ಬಂದಾಗ ಈ ವಿಷಯವನ್ನು ಕೆಲವರು ಪ್ರಸ್ತಾಪ ಮಾಡಿದ್ದಾರೆ. ಆಗ ಅಲ್ಲಿ ಜಾಗ ಕೊಡುವುದಾದರೆ ಸಂಶೋಧನಾ ಕೇಂದ್ರವನ್ನು ಮಂಜೂರು ಮಾಡುತ್ತೇವೆಂದು ಸಾರ್ವಜನಿಕ ಸಭೆಯಲ್ಲಿ ಕೇಂದ್ರದ ಮಂತ್ರಿಗಳು